ಓ.ಎಸ್. ನಂಃ 22/2020

**ಡಿ.ಡಬ್ಲ್ಯೂಃ 2**

**ದಿನಾಂಕ 22.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃಶ್ರೀ ಸಿ.ಆರ್.ಎಲ್ ವಕೀಲರಿಂದಃ**

1. ವೆಂಕಟದಾಸಯ್ಯ ರವರು ನನ್ನ ಪರಿಚಯಸ್ಥರಾಗಿದ್ದು, ತಾವು ತನ್ನ ಮಗಳಾದ ಎ.ವಿ.ಶೋಭಾರವರಿಗೆ ದಾನಪತ್ರ ಮಾಡುವುದಾಗಿ ಹೇಳಿ ತಮ್ಮೊಂದಿಗೆ ಒಂದು ದಾನಪತ್ರವನ್ನು ತಂದಿದ್ದು, ಸದರಿ ದಾನಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡುವಂತೆ ಸದರಿಯವರು ಕೋರಿದ ಮೇಲೆ ಸದರಿಯವರು ತಂದಿದ್ದ ದಾನಪತ್ರಕ್ಕೆ ನಾನು ಸಾಕ್ಷಿದಾರನಾಗಿ ನನ್ನ ಸಹಿಯನ್ನು ಮಾಡಿರುತ್ತೇನೆ.

2. ವೆಂಕಟದಾಸಯ್ಯ ರವರು ತಯಾರು ಮಾಡಿ ತಂದಿದ್ದ ಸದರಿ ದಾನಪತ್ರಕ್ಕೆ ನಾನು ಮತ್ತು ರವಿ ಎನ್ನುವವರು ಸಾಕ್ಷಿದಾರರಾಗಿ ನಮ್ಮ ಸಹಿಗಳನ್ನು ಹಾಕಿರುತ್ತೇವೆ. ಇನ್ನೊಬ್ಬ ಸಾಕ್ಷಿದಾರರಾದ ರವಿಯವರನ್ನು ಪ್ರತಿವಾದಿಯವರು ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರು ವೆಂಕಟದಾಸಯ್ಯ ಅಂತ ಇದ್ದು, ಸದರಿ ವೆಂಕಟದಾಸಯ್ಯರವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

3. ನಿಡಿ.12 ರ ದಾನಪತ್ರ ಬರೆಯುವ ಕಾಲಕ್ಕೆ ಪ್ರತಿವಾದಿಯ ತಂದೆಗೆ 80 ವರ್ಷದ ಒಳಗೆ ವಯಸ್ಸಾಗಿತ್ತು. ದಾವಾ ಆಸ್ತಿಯನ್ನು ತಾವು 1968 ರಲ್ಲಿ ತಮ್ಮ ಸಹೋದರನಾದ ಗಿರಿದಾಸಯ್ಯರವರಿಂದ ಖರೀದಿ ಮಾಡಿರುವುದಾಗಿ ಪ್ರತಿವಾದಿಯ ತಂದೆ ನನ್ನಲ್ಲಿ ಹೇಳಿರುತ್ತಾರೆ. ನನಗೆ ವಾದಿ ಮತ್ತು ಅವರ ಸಹೋದರನಾದ ಶಿವುರವರ ಪರಿಚಯವಿದೆ. ದಿನಾಂಕ 15.12.2012 ರಂದು ವಾದಿಯ ಹೆಸರಿಗೆ ವಾದಿಯ ತಂದೆ ಬರೆದುಕೊಟ್ಟ ಸಮ್ಮತಿ ಒಪ್ಪಂದ ಕರಾರುಪತ್ರವನ್ನು ನೀವೇ ಬರೆದುಕೊಟ್ಟಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಿನಾಂಕ 15.12.2012 ರ ಸಮ್ಮತಿ ಒಪ್ಪಂದ

ಕರಾರು ಪತ್ರವಾಗಿರಬಹುದು ಆದರೆ ಸದರಿ ದಾಖಲೆಯನ್ನು ನಾನು ಬರೆದುಕೊಟ್ಟಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ದಿನಾಂಕ 15.12.2012 ರ ಸಮ್ಮತಿ ಒಪ್ಪಂದ ಕರಾರು ಪತ್ರವನ್ನು ನಾನೇ ಬರೆದುಕೊಟ್ಟಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ನಿಡಿ.12 ರ ದಾನಪತ್ರದ ದಸ್ತಾವೇಜು ಬರಹಗಾರನಾಗಿರುವುದಿಲ್ಲ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ವೆಂಕಟದಾಸಯ್ಯರವರು ನನ್ನ ಸಮಕ್ಷಮದಲ್ಲಿ ನಿಡಿ.12 ಕ್ಕೆ ಸಹಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ಅನ್ಯೋನ್ಯವಾಗಿರುವುದರಿಂದ ನಾವಿಬ್ಬರೂ ಶಾಮೀಲಾಗಿ ನಿಡಿ.12 ರ ಸುಳ್ಳು ದಾಖಲೆಯನ್ನು ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ನಿಡಿ.12ರ ದಾಖಲೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಪರಿಚಯಸ್ಥರ ಪರ ಸಾಕ್ಷಿ ನುಡಿಯಲು ನಾನು ನ್ಯಾಯಾಲಯಕ್ಕೆ ಈ ಹಿಂದೆ 3-4 ಬಾರಿ ಬಂದಿರುತ್ತೇನೆ. ನಿಡಿ.12 ರ ದಾನಪತ್ರದಲ್ಲಿ ನಮೂದಿಸಿದ ಆಸ್ತಿಯ ವಿವರ ನನಗೆ ಈಗ ನೆನಪಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**